ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 3, July-August 2023, Pp. 1-5
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ನಾಟ್ಯಶಾಸ್ತ್ರ : ಒಂದು ಅವಲೋಕನ

**ಡಾ. ಶರಣಬಸಪ್ಪ. ಮೇಡೆದಾರ**
ಉಪನ್ಯಾಸಕರು, ಲಲಿತಕಲಾ ಹಾಗೂ ಸಂಗೀತ ಮಹಾವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

***Abstract:***
*ನಾಟ್ಯಶಾಸ್ತ್ರ ಕೃತಿಯು ಭಾರತದ ರಂಗ ಸಂಪ್ರದಾಯಗಳೆಲ್ಲದ್ದಕ್ಕೂ ಆಕರ ಗ್ರಂಥವಾಗಿದೆ. ಜಗತ್ತಿನಲ್ಲಿ ಮೊದಲಬಾರಿಗೆ ರಂಗ ಮಾಧ್ಯಮವನ್ನು ಶಾಸ್ತ್ರೀಯವಾಗಿ ಸೂತ್ರೀಕರಿಸಿದ ಮಹತ್ವದ ಕೋಶವೆಂದು ಈ ಕೃತಿಯು ಪ್ರಸಿದ್ಧವಾಗಿದೆ. ಈ ಬೃಹತ್ ಕೋಶವು ತನ್ನ 36 ಅಧ್ಯಾಯಗಳ ವ್ಯಾಪ್ತಿಯಲ್ಲಿ ನಾಟ್ಯದ ಉಗಮದಿಂದ ಆರಂಭಿಸಿ ಅದರ ಉಪಯೋಗದವರೆಗೆ ರಂಗ ಮಾಧ್ಯಮದ ವಿವಿಧ ಆಯಾಮಗಳನ್ನು ಕುರಿತು ಪ್ರಸ್ತಾಪಿಸುತ್ತದೆ. ನಾಟ್ಯಶಾಸ್ತ್ರದಲ್ಲಿ ರಸ, ಛಂದಸ್ಸು, ಭಾಷೆ, ರಂಗಮಂಚ, ವೇಷಭೂಷಣ, ಅಭಿನಯ, ಸಂಗೀತ ಹಾಗೂ ನೃತ್ಯ ಮೊದಲಾದ ವಿಷಯಗಳನ್ನು ಕುರಿತು ವಿವೇಚನೆ ಮಾಡಲಾಗಿದೆ.*

***Keywords:*** *ನಾಟ್ಯಶಾಸ್ತ್ರ, ಭರತಮುನಿ, ನಾಟ್ಯೋತ್ಪತ್ತಿ, ನಾಟ್ಯಮಂಟಪ, ವಾದ್ಯವೃಂದ, ರಸವಿಚಾರ.*

## ಪೀಠಿಕೆ

ನಾಟ್ಯಶಾಸ್ತ್ರ ಗ್ರಂಥದ ರಚನಾಕಾರನಾಗಿ **ಭರತನ** ಹೆಸರು ಅಮರವಾಗಿದೆ. ಪ್ರಚಲಿತ ನಾಟ್ಯ ಪರಂಪರೆಯ ಪ್ರವರ್ತನೆಯ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ಆದರೆ ಭರತನ ಐತಿಹಾಸಿಕ ವ್ಯಕ್ತಿತ್ವದ ಬಗೆಗೆ ಅಸ್ಪಷ್ಟತೆ ಹಾಗೂ ಮತಭೇದಗಳು ಇವೆ. **"ಪಂಚ ಭಾರತೀಯ"** ಎಂಬ ನಾಟ್ಯಗ್ರಂಥದ ಆಧಾರದ ಮೇಲೆ ಐದು ಭರತರ ಕಲ್ಪನೆ ಮಾಡಲಾಗಿದೆ. ಅವುಗಳೆಂದರೆ ವೃದ್ಧ ಭರತ, ಭರತ, ಕೋಹಲ ಭರತ, ದತ್ತಿಲ ಭರತ ಮತ್ತು ಮತ್ಸ್ಯೇಯ ಪುರಾಣದಲ್ಲಿ ಭರತ ಮುನಿಯ ಉಲ್ಲೇಖ ಅನೇಕ ಸಲ ಬರುತ್ತದೆ **"ಭಾಣಭಟ್ಟ"**ನ ಕೃತಿಗಳಲ್ಲಿಯೂ ನಾಟ್ಯಶಾಸ್ತ್ರದ ವರ್ಣನೆ ಬರುತ್ತದೆ.

ಸಂಸ್ಕೃತ ಸಾಹಿತ್ಯದಲ್ಲಿ ದಶರಥ ಭರತ, ಜಡಭರತ, ನಾಟ್ಯಚಾರ್ಯ ಭರತರ ಉಲ್ಲೇಖವಿದೆ. ಗಮನಿಸಬೇಕಾದ ಅಂಶವೆಂದರೆ ನಾಟ್ಯಶಾಸ್ತ್ರದ ನಿರ್ಮಾಣ ಕಾಲದವರೆಗೆ ಭರತ ಶಬ್ದದ ಪ್ರಯೋಗವು ನಟನೆಯ ಕಾಲದಲ್ಲಿ ತೊಡಗಿಸಿಕೊಳ್ಳುವ ವರ್ಗಕ್ಕೆ ಅನ್ವಯಿಸುತ್ತದೆ. ಕೆಲವು ವಿದ್ವಾಂಸರ ಪ್ರಕಾರ ಭರತನು ವಾಲ್ಮೀಕಿಯ ಸಮಕಾಲೀನನಾಗಿದ್ದಾನೆ. ನಾಟ್ಯಶಾಸ್ತ್ರದ 36ನೇ ಅಧ್ಯಾಯದಲ್ಲಿ ಹೇಳಿದಂತೆ ಭರತನು 'ರಾಜಾನಂಶನ' ಸಮಕಾಲೀನನಾಗಿದ್ದಾನೆ ಎಂದು ಹೇಳಲ್ಪಟ್ಟಿದೆ. ಬೇರೆ ಬೇರೆ ಮತಗಳನ್ನು ಗಮನಿಸಲಾಗಿ ಭರತನ ಕಾಲದ ಬಗೆಗೆ ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಆದರೂ ವಿದ್ವಾಂಸರು ಅಥವಾ ಶಾಸ್ತ್ರಗಳಲ್ಲಿ ಅವರ ಕಾಲ ಕ್ರಿ.ಪೂ. 2ನೇ ಶತಮಾನದಿಂದ ಕ್ರಿ.ಶ. 2ನೇ ಶತಮಾನ ಎಂದು ಹೇಳಲ್ಪಟ್ಟಿದೆ.

## ನಾಟ್ಯಶಾಸ್ತ್ರ

ನಾಟ್ಯಶಾಸ್ತ್ರದಲ್ಲಿ 36 ಅಧ್ಯಾಯಗಳ ವ್ಯಾಪ್ತಿಯಲ್ಲಿ ನಾಟ್ಯದ ಉಗಮದಿಂದ ಆರಂಭಿಸಿ ಅದರ

***Please cite this article as:*** ಶರಣಬಸಪ್ಪ. ಮೇಡೆದಾರ. (2023). ನಾಟ್ಯಶಾಸ್ತ್ರ: ಒಂದು ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 2(3), 1–5.

ಉಪಯೋಗದವರೆಗೆ ರಂಗ ಮಾಧ್ಯಮದ ವಿವಿಧ ಆಯಾಮಗಳನ್ನು ಕುರಿತು ಪ್ರಸ್ತಾಪಿಸುತ್ತದೆ. ನಾಟ್ಯಮಂಟಪ, ಸ್ವರೂಪ ಹಾಗೂ ನಿರ್ಮಾಣದಿಂದ ತೊಡಗಿದ ಕಣ್ಣುಗುಡ್ಡೆಗಳ ಸೂಕ್ಷ್ಮಾತಿಸೂಕ್ಷ್ಮ ಅಭಿನಯಗಳವರೆಗೆ ಅಸಂಖ್ಯಾತ ವಿವರಗಳನ್ನು ಇಲ್ಲಿ ಸಿದ್ಧಾಂತೀಕರಿಸಿ ವರ್ಣಿಸಲಾಗಿದೆ. ಜೊತೆಗೆ ಸಂಗೀತ, ಛಂದಸ್ಸು, ಕಾವ್ಯ ಮೀಮಾಂಸೆ ಮೊದಲಾದ ಹಲವು ಸಂಬಂಧಿತ ಕ್ಷೇತ್ರಗಳ ತುಂಬಾ ಉಪಯುಕ್ತವಾದ ಮಾಹಿತಿಗಳು ಇಲ್ಲಿ ಲಭ್ಯವಿದೆ.

ಜಗತ್ತಿನ ಎಲ್ಲ ಕಲೆಗಳು ನಾಟ್ಯದಲ್ಲಿ ಸಮಾಗಮಗೊಂಡಿದೆ ಎಂದು ನಾಟ್ಯಶಾಸ್ತ್ರ ಉಲ್ಲೇಖಿಸುವುದು. ಈ ಅರ್ಥದಲ್ಲಿಯೇ ಪ್ರಾಚೀನ ಭಾರತದ ಹಲವು ಕಲಾ ಪ್ರಕಾರಗಳ ವಿಶ್ವಕೋಶವೇ ಇದಾಗಿದೆ ಎನ್ನಬಹುದು. ಇದರಲ್ಲಿ 6000 ಶ್ಲೋಕಗಳು ಒಳಗೊಂಡಿವೆ. ಭರತನ ನಾಟ್ಯಶಾಸ್ತ್ರವು ಪ್ರದರ್ಶಕ ಕಲೆಗಳಾದ ನಾಟಕ, ಸಂಗೀತ ಮತ್ತು ನೃತ್ಯಗಳಿಗೆ ಸಂಬಂಧಿಸಿದ ಪ್ರಾಚೀನ ಶಾಸ್ತ್ರ ಗ್ರಂಥವಾಗಿದೆ. ಕ್ರಿ.ಪೂ. 200ರ ಅವಧಿಯಲ್ಲಿ ಬರೆಯಲ್ಪಟ್ಟಿದೆ ಎಂದು ನಂಬಲಾದ ಈ ಗ್ರಂಥವು ಮುಖ್ಯವಾಗಿ ರಂಗ ಚಟುವಟಿಕೆಗೆ ಸಂಬಂಧಿಸಿದೆಯಾದರೂ ಭಾರತೀಯ ಶಾಸ್ತ್ರೀಯ ನೃತ್ಯ, ಸಂಗೀತ ಹಾಗೂ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಬೆಳಕು ಚೆಲ್ಲುತ್ತದೆ. ರಂಗ ಚಟುವಟಿಕೆಯ ಭಾಗವಾಗಿ ರಂಗ ನಿರ್ಮಾಣ, ಪ್ರಸಾದನ (ಮೇಕಪ್) ಒಳಗೊಂಡು ರಂಗ ಚಟುವಟಿಕೆಯ ಪ್ರತಿಯೊಂದು ಪ್ರಕೃತಿ ವಿಷಯಗಳಿಗೆ ಸಂಬಂಧಿಸಿದಂತೆ ವಿವರ ಇಲ್ಲಿದೆ.

**ಭರತೋಕ್ತ ಸಂಗೀತ ಸ್ವರಗಳ ವಿಚಾರ ಹಾಗೂ ಅಲಂಕಾರಗಳ ಪ್ರಕಾರಗಳು**

ಸ್ವರಗಳು ಏಳು ಈ ಏಳು ಸ್ವರಗಳ ಹೆಸರುಗಳು ಈ ಪ್ರಕಾರವಿದೆ, ಷಡ್ಜ, ರಿಷಭ, ಗಾಂಧಾರ, ಮಧ್ಯಮ, ಪಂಚಮ, ಧೈವತ್ ಹಾಗೂ ನಿಷಾಧ. ಶೃತಿಗಳ ಆಧಾರದ ಮೇಲೆ ಈ ಸ್ವರಗಳನ್ನು ಸ್ಥಾಪನೆ ಮಾಡಲಾಗಿದ್ದು, ಸ್ವರಗಳಲ್ಲಿ ಕಂಡುಬರುವ ಅಂತರವು ಶೃತಿಗಳ ಅಂತರವನ್ನೇ ಅವಲಂಬಿಸಿದೆ. ಸೂಕ್ಷ್ಮ ಧ್ವನಿಯ ಅಂತರಕ್ಕೆ ಶೃತಿ ಎಂದು ಹೇಳಲಾಗಿದೆ. ಸ್ವರಗಳಿಗೆ ವಾದಿ, ಸಂವಾದಿ, ಅನುವಾದಿ, ವಿವಾದಿ, ಸಂಜ್ಞೆಗಳನ್ನು ಕೊಡಲಾಗಿದೆ. ಮೇಲೆ ಕಾಣಿಸಿದ ಚತುರ್ವಿಧ ಸ್ವರಗಳಲ್ಲಿ ಅತಿಸ್ಪಷ್ಟ ಹಾಗೂ ಪ್ರಯೋಗ ಬಾಹುಳ್ಯತೆಯಿಂದ ಕೂಡಿದ ಸ್ವರಕ್ಕೆ 'ವಾದಿ' ಎನ್ನಲಾಗಿದೆ. ಯಾವುದೇ ಎರಡು ಸ್ವರಗಳ ಮಧ್ಯ 9 ಹಾಗೂ 13 ಶೃತಿಗಳ ಅಂತರವಿದ್ದರೆ, ಅಂತಹ ಸ್ವರಗಳಿಗೆ 'ಸಂವಾದಿ' ಎಂದು ಹೆಸರು. ಉದಾ: 'ಸ' ಹಾಗೂ 'ಮ' 'ಸ' ಹಾಗೂ 'ಪ' 'ರೆ' ಹಾಗೂ 'ಧ' 'ಗ' ಹಾಗೂ 'ನಿ' ಈ ಸ್ವರಗಳು ಪರಸ್ಪರ ಸಂವಾದಿ ಸ್ವರಗಳು. ವಾದಿ, ಸಂವಾದಿ ಹಾಗೂ ಅನುವಾದಿ ಸ್ವರಗಳ ಮಧ್ಯ 30 ಶೃತಿಗಳು ಒಳಗೊಂಡಿವೆ ಎಂದು ಭಾವಿಸಿದ್ದಾನೆ. ಷಡ್ಜಗ್ರಾಮ ಯಾವುದು ಭರತನ ಕಾಲದಲ್ಲಿ ಶುದ್ಧಸ್ವರಗಳನ್ನೊಳಗೊಂಡಿತ್ತೋ ಅದರಲ್ಲಿ ಶೃತಿಗಳ ವಿಭಜನೆ ಈ ಪ್ರಕಾರ ಮಾಡಲಾಗಿದೆ. ಷಡ್ಜದಿಂದ ತಾರ ಷಡ್ಜದವರೆಗೆ 3, 2, 4, 4, 3, 2 ಹಾಗೂ 4 ಈ ಪ್ರಕಾರ ಪ್ರತಿಯೊಂದು ಸ್ವರಗಳ ಮೇಲೆ ಶೃತ್ಯಂತರವಿದೆ. ಮಧ್ಯ ಷಡ್ಜಕ್ಕೆ 4 ಶೃತಿಗಳು ರಿಷಭಕ್ಕೆ 3, ಗಾಂಧಾರಕ್ಕೆ 3, ಮಧ್ಯಮಕ್ಕೆ 4, ಪಂಚಮಕ್ಕೆ 4, ಧೈವತ್‌ಗೆ 3, ಹಾಗೂ ನಿಷಾಧಕ್ಕೆ 2 ಎಂದು ಭಾವಿಸಲಾಗಿದೆ. ಈ ಪ್ರಕಾರ ಸ್ವರ ಸಪ್ತಕದಲ್ಲಿ 22 ಶೃತಿಗಳಿರುತ್ತವೆ ಮೇಲೆ ಕಾಣಿಸಿದ ಶೃತಿರಚನೆಯಲ್ಲಿ ಪ್ರತಿಯೊಂದು ಸ್ವರ ತಮ್ಮ ಅಂತಿಮ ಶೃತಿಯ ಮೇಲೆ ಇರುತ್ತದೆ.

ಸಂಗೀತ ಶಾಸ್ತ್ರದಲ್ಲಿ ಮೂರು ಗ್ರಾಮಗಳಿವೆ. ಅವುಗಳೆಂದರೆ ಷಡ್ಜಗ್ರಾಮ, ಮಧ್ಯಮಗ್ರಾಮ ಹಾಗೂ ಗಾಂಧಾರಗ್ರಾಮ. ಆದರೆ ನಾಟ್ಯಶಾಸ್ತ್ರದಲ್ಲಿ ಕೇವಲ ಷಡ್ಜ ಹಾಗೂ ಮಧ್ಯಮ ಗ್ರಾಮದ ಉಲ್ಲೇಖವಿದೆ. ಬಹುಶಃ ಭರತನ ಕಾಲದಲ್ಲಿ ಗಾಂಧಾರಗ್ರಾಮದ ಲೋಪವಾಗಿತ್ತೋ ಏನೋ? ಭರತೋಕ್ತ ಈ ಎರಡು ಗ್ರಾಮಗಳ ಸ್ವರಗಳಲ್ಲಿಯೂ ಶೃತಿ ಸಂಖ್ಯೆಯ ವಿಭಜನೆಯಲ್ಲಿಯೂ ಸಹ ಬೇರೆ ಬೇರೆ ಪದ್ಧತಿಗಳನ್ನು ತಿಳಿಸಲಾಗಿದೆ. ಮಧ್ಯಮ ಗ್ರಾಮದಲ್ಲಿ ಮಧ್ಯಮ ಸ್ವರಕ್ಕೆ

4, ಪಂಚಮಕ್ಕೆ 3, ಧೈವತಕ್ಕೆ 4, ನಿಷಾಧಕ್ಕೆ 2, ಷಡ್ಜಕ್ಕೆ 4, ರಿಷಭಕ್ಕೆ 3 ಹಾಗೂ ಗಾಂಧಾರಕ್ಕೆ 2 ಶೃತಿಗಳೆಂದು ಭಾವಿಸಲಾಗಿದೆ. ಇದರಿಂದ ಷಡ್ಜ ಹಾಗೂ ಮಧ್ಯಮ ಗ್ರಾಮದಲ್ಲಿ ವ್ಯತ್ಯಾಸವು ಪ್ರಮುಖವಾಗಿ ಪರಿಚಯ ಸ್ವರದ ಮೇಲೆ ಕೇಂದ್ರೀಕೃತವಾಗಿರುವುದು ಸ್ಪಷ್ಟವಾಗುತ್ತದೆ.

ಸ್ವರ ಹಾಗೂ ಶೃತಿ ಸಂಖ್ಯೆಗಳ ನಿರೂಪಣಾ ನಂತರ ಭರತಮುನಿ ಮೂರ್ಛನೆಗಳ ವಿವರಣೆ ನೀಡಿದ್ದಾನೆ. ಭರತ ಕಾಲದ ಮೂರ್ಛನೆಗಳು ಅವರೋಹಿ ಕ್ರಮದಿಂದ ಸ್ಥಾಪಿಸಲ್ಪಟ್ಟಿದ್ದವು ಎಂದು ಉಲ್ಲೇಖ ಸಿಗುತ್ತದೆ. 7 ಸ್ವರಗಳ ಕ್ರಮಬದ್ಧವಾದ ಜ್ಞಾನ ಮೂರ್ಛನೆ ಎಂದು ವಿವರಿಸಿದ್ದಾರೆ. ನಾಟ್ಯಶಾಸ್ತ್ರದಲ್ಲಿ ಸ್ವರ ಸಾಧಾರಣದ ಉಲ್ಲೇಖ ಸಿಗುತ್ತದೆ. ತಮ್ಮ ಶುದ್ಧಸ್ಥಾನಕ್ಕಿಂತ 2 ಶೃತಿಗಳಷ್ಟೂ ಮೇಲೆ ಏರಿಸಲ್ಪಟ್ಟ ಸ್ವರಗಳಿಗೆ 'ಸ್ವರ ಸಾಧಾರಣ' ಎಂದು ಹೇಳಲಾಗಿದೆ. ಈ ಸ್ವರ ಸಾಧಾರಣ ಕೇವಲ 'ಗಾಂಧಾರ' ಹಾಗೂ 'ನಿಷಾಧ' ಈ ಎರಡು ಸ್ವರಗಳ ಮೇಲೆ ಸಿದ್ಧವಾಗುತ್ತದೆ ಮತ್ತು ಸಾಧಾರಣವಾದ ನಂತರವೆ ಈ ಸ್ವರಗಳನ್ನು 'ಅಂತರ ಗಾಂಧಾರ' ಹಾಗೂ 'ಕಾಕಲೀ ನಿಷಾಧ' ಎಂಬ ಹೆಸರಿನಿಂದ ಗುರುತಿಸಲಾಗುತ್ತದೆ.

ಗಾಂಧರ್ವದಲ್ಲಿ ಅಂತರ್ಗತವಾಗಿ 'ಜಾತಿ' ಎಂಬುದರ ಉಲ್ಲೇಖ ನಾಟ್ಯಶಾಸ್ತ್ರದಲ್ಲಿ ಮಾಡಲಾಗಿದೆ. ಪರಂಪರಾಗತ ಸ್ವರ ಪಂಕ್ತಿಗಳು ಅಥವಾ ಜಾನಪದ ಗೀತದ ಧ್ವನಿಗಳ ವರ್ಗೀಕೃತ ಸಮೂಹಕ್ಕೆ 'ಅಭಿವ್ಯಂಜನ' ಎಂದು ಹೇಳಲಾಗಿದೆ. ಇದರಿಂದ ಭರತನ ಕಾಲದಲ್ಲಿ ಪ್ರಚಾರದಲ್ಲಿದ್ದ ಸಂಗೀತದಲ್ಲಿ ಜಾತಿಗಾಯನದ ಜೊತೆಗೆ ರಂಗ ಗಾಯನ ಪದ್ಧತಿಯೂ ಸಹ ಪ್ರಚಾರದಲ್ಲಿತ್ತು ಎಂಬುವುದು ಸ್ಪಷ್ಟವಾಗುತ್ತದೆ. ಜಾತಿಗಾಯನದ ಪ್ರಚಾರದಲ್ಲಿದ್ದ ಜನ ಸಂಗೀತಪ್ರಿಯರಾಗಿದ್ದರು. ನಿಯಮಗಳ ಸಂಸ್ಕಾರ ಹಾಗೂ ಪರಿಸ್ಕಾರದಿಂದ ಕೆಲವು ವಿದ್ವಾಂಸರುಗಳು ಜಾತಿಗಾಯನಕ್ಕೆ ಉನ್ನತ ಸ್ಥಾನ ಕೊಟ್ಟಿದ್ದರು. ಭರತನು ಸ್ವರ ಹಾಗೂ ಪದಗಳಲ್ಲಿ 18 ಜಾತಿಯ ವಿವೇಚನೆ ಮಾಡಿದ್ದಾನೆ. ಜಾತಿಗಳಲ್ಲಿ ದಶವಿಧದ ಲಕ್ಷಣಗಳನ್ನು ವರ್ಣಿಸಿದ್ದಾನೆ. ಉದಾ: ಗೃಹ, ಅಂಶ, ತಾರ, ಮಂದ್ರ, ನ್ಯಾಸ, ಅಪನ್ಯಾಸ, ಅಲ್ಪತ್ವ, ಬಹುತ್ವ, ಷಾಡವತ, ಔಡವತ ಮುಂತಾದವುಗಳು ಸಂಗೀತದಲ್ಲಿ ರಸದ ಆವಿಷ್ಕಾರದ ಬಗೆಗೆ ಸಹ ಭರತನು ನಾಟ್ಯಶಾಸ್ತ್ರದಲ್ಲಿ ಕೆಲವು ಮಹತ್ವ ಪೂರ್ಣ ವಿಧಾನಗಳನ್ನು ವಿವರಿಸಿದ್ದಾನೆ.

ಇವರ ಹೇಳಿಕೆಯ ಪ್ರಕಾರ ಹಾಸ್ಯರಸದ ಉತ್ಪತ್ತಿ ಮಧ್ಯಮ ಹಾಗೂ ಪಂಚಮ ಸ್ವರಗಳ ಪ್ರಾಬಲ್ಯದಿಂದ ಉಂಟಾಗುತ್ತದೆ. ಷಡ್ಜ ಹಾಗೂ ರಿಷಭ ಸ್ವರಗಳು ವೀರ, ರೌದ್ರ, ಅಧ್ಭುತ ರಸಗಳ ಪೋಷಕವಾಗಿವೆ. ಗಾಂಧಾರ ಹಾಗೂ ನಿಷಾಧ ಸ್ವರಗಳು ಕರುಣ ರಸದ ಪೋಷಕವಾಗಿದ್ದು, ಧೈವತ್ ಸ್ವರದ ವಿಶೇಷ ಪ್ರಯೋಗ ಬೀಭತ್ಸ ಹಾಗೂ ಭಯಾನಕ ರಸದ ಪ್ರೇರಕ ಎಂದು ಸಿದ್ಧವಾಗಿವೆ. ಇದರ ಹೊರತಾಗಿ ಕೆಲವು ವಿಶಿಷ್ಟ ಸ್ವರಗಳ ಸಮುದಾಯ ವಿಶಿಷ್ಟ ರಸಗಳ ಪೋಷಕವಾಗಿವೆ ಎಂದು ಭಾವಿಸಲಾಗಿದೆ.

ಸಂಗೀತದಲ್ಲಿ ವರ್ಣ ಹಾಗೂ ಅಲಂಕಾರಗಳ ಸ್ಥಾನ, ಪಥ್ಯ ಹಾಗೂ ಗೇಹಗಳಲ್ಲಿ ಸಮಾನ ರೂಪದಿಂದ ಮಹತ್ವ ಪೂರ್ಣವಾಗಿರುತ್ತವೆ ಎಂದು ನಾಟ್ಯಶಾಸ್ತ್ರದಲ್ಲಿ ಹೇಳಲಾಗಿದೆ. ಸಂಗೀತದ ನಾಲ್ಕು 'ವರ್ಣಗಳು' ಉದಾ: ಆರೋಹಿ, ಅವರೋಹಿ, ಸ್ಥಾಯಿ ಹಾಗೂ ಸಂಚಾರಿ ಹಾಗೂ ಪಥ್ಯದ ಆರು ಅಲಂಕಾರಗಳು ಉದಾ: ಉಚ್ಚ, ದೀಪ್ತಿ, ಮಂದ್ರ, ನೀಚ, ದೃತ್ ಹಾಗೂ ವಿಲಂಬಿತಗಳನ್ನು ನಾಟ್ಯಶಾಸ್ತ್ರದಲ್ಲಿ ವಿವರಿಸಲಾಗಿದೆ. ವರ್ಣಗಳ ವಿಸ್ತಾರ ಮಂದ್ರ, ಮಧ್ಯ, ತಾರ ಮೂರು ಸ್ಥಾನಗಳಲ್ಲಿ ಮಾಡಲಾಗುತ್ತದೆ ಎಂದು ಹೇಳಲಾಗಿದೆ. ಅಲಂಕಾರ ಉತ್ಪತ್ತಿ ನಾಲ್ಕು ವರ್ಣಗಳ ಆಧಾರದ ಮೇಲಿದ್ದು ಅವುಗಳ ಪ್ರಯೋಗ ಯೋಗ್ಯ ರೂಪದಿಂದ ಬೇರೆ ಬೇರೆ ವರ್ಣಗಳ ಅನುಕೂಲಕ್ಕಾಗಿ ಮಾಡಬೇಕೆಂದು ಭರತಮುನಿ ಹೇಳಿದ್ದಾನೆ. ಸಂಗೀತದಲ್ಲಿ ಅಲಂಕಾರದ ಮಹತ್ವ ಕುರಿತು ಹೇಳುವಾಗ ಚಂದ್ರನಿಲ್ಲದ ಬಾನಿನಂತೆ, ನೀರಿಲ್ಲದ ನದಿಯಂತೆ, ಪುಷ್ಪವಿಲ್ಲದ

ಬಳ್ಳಿಯಂತೆ ಹಾಗೂ ಅಲಂಕಾರವಿಲ್ಲದ ಸ್ತ್ರೀ ಯಾವ ಪ್ರಕಾರ ಶೋಭಾಯಮಾನವಾಗಿ ಕಾಣುವುದಿಲ್ಲವೋ ಅದೇ ಪ್ರಕಾರವಾಗಿ ಅಲಂಕಾರವಿಲ್ಲದ ಗೀತ ವಿಹೀನವಾಗಿ ವ್ಯಕ್ತವಾಗುತ್ತದೆ.

**ಭರತೋಕ್ತ ಅಲಂಕಾರಗಳು ಈ ಪ್ರಕಾರ ಇವೆ**

ಪ್ರಸನ್ನಾದಿ, ಪ್ರಸನ್ನಾಂತ, ಪ್ರಸನ್ನಮಧ್ಯ, ಬಿಂದುಕಂಪಿತ, ರೈಚಿತ, ತಾರಮಂದ್ರ, ಪ್ರಸನ್ನಮಂದ್ರ, ತಾರಪ್ರಸನ್ನ, ಪ್ರಭೋಲಿತ, ನಿವೃತ್ತ, ಪ್ರವೃತ್ತ, ಪ್ರಸಾದ, ಅವಲೋಕ ಹಾಗೂ ವೇಣು. ಗಾಂಧರ್ವದಲ್ಲಿ ಗೀತೆಯ ಅಂತರ್ಭಾವವು ಸಹ ಭರತಮುನಿಯಿಂದ ಹೇಳಲ್ಪಟ್ಟಿದೆ. ಗೀತೆಯಲ್ಲಿ ನಾಲ್ಕು ಪ್ರಕಾರಗಳಿವೆ ಮಾಗಧಿ, ಅರ್ಧಮಾಗಧಿ, ಸಂಭಾವಿತ ಹಾಗೂ ಮೈಥಿಲಿ. ಭರತಮುನಿಯ ವಿಚಾರನುಸಾರ ಭಿನ್ನ ವೃತ್ತಿಯಲ್ಲಿ ಹಾಡಲಾಗುತ್ತಿರುವ ಗೀತಕ್ಕೆ 'ಮಾಗಧಿ' ಎಂದು ಹೇಳಗಾಗುತ್ತಿತ್ತು. ವೃತ್ತಿ ಗಾಯನ ವಾದನದ ಒಂದು ವಿಶಿಷ್ಟ ಶೈಲಿಯಾಗಿದೆ. ವೃತ್ತಿಯಲ್ಲಿ ಮೂರು ಪ್ರಕಾರಗಳಿವೆ ಎಂದು ಹೇಳಲಾಗಿದೆ ಉದಾ: ಚಿತ್ರಾ, ವಾರ್ತಿಕ ಹಾಗೂ ದಕ್ಷಿಣ.

1. ಚಿತ್ರಾವೃತ್ತಿಯಲ್ಲಿ ಗಾನದ ಪ್ರಾಧಾನ್ಯವಿದ್ದು, ವಾದ್ಯಗಳು ಸಂಕ್ಷೇಪವಿರುತ್ತವೆ. ಇದಲ್ಲದೆ ಧೃತ ಲಯ, ಸಮ ಲಯ ಹಾಗೂ ಅನಾಗತ ಗೃಹ ಇದರ ವೈಶಿಷ್ಟ್ಯವಾಗಿವೆ.
2. ವಾರ್ತಿಕ ವೃತ್ತಿಯಲ್ಲಿ ಗೀತ ಹಾಗೂ ವಾದ್ಯದ ಸ್ಥಾನ ಸಮಾನವಾಗಿದ್ದು, ಮಧ್ಯಲಯ "ಸ್ತೋತೋಗತಾಯತಿ" ಹಾಗೂ ದ್ವಿಕಲತಾಲ ಇರುವುದು ಈ ಶೈಲಿಯ ವೈಶಿಷ್ಟ್ಯವಾಗಿದೆ.
3. ದಕ್ಷಿಣ ವೃತ್ತಿಯಲ್ಲಿ ವಿಲಂಬಿತ ಲಯ "ಗೋಪಚ್ಛಾಯತಿ" ಹಾಗೂ 'ಚತುಷ್ಕಾಲ ತಾಲದ ಪ್ರಾಧಾನ್ಯತೆ ಇದೆ.

ಮಾಗಧಿಗಿಂತ ಅರ್ಧ ಕಾಲದಲ್ಲಿ ಅಂದರೆ ದೃತಲಯದಲ್ಲಿ ಹಾಡಲಾಗುವ ಗೀತೆ 'ಅರ್ಧ ಮಾಗಧಿ' ಎಂದು ಗುರು ಮತ್ತು ಲಘು ಅಕ್ಷರಯುಕ್ತ ಗೀತೆಗಳು ಕ್ರಮಶಃ 'ಸಂಭಾವಿತ' ಹಾಗೂ 'ಪ್ರಥುಲ' ಎಂದೂ ಹೇಳಲಾಗಿದೆ.

ನಾಟ್ಯಶಾಸ್ತ್ರದ 32ನೇ ಅಧ್ಯಾಯದಲ್ಲಿ 'ಧೃವಾಗೀತ' ಎಂಬ ಬಗೆಗೆ ವರ್ಣನೆ ಸಿಗುತ್ತದೆ. "ಧೃವಾಗೀತ" ಗಳು ನಾಟ್ಯಪ್ರಯೋಗಗಳಲ್ಲಿ ಒಂದು ಮಹತ್ವ ಪೂರ್ಣ ಸ್ಥಾನ ಹೊಂದಿರುತ್ತಿದ್ದವು. ಇಂತಹ ಗೀತೆಗಳಲ್ಲಿ ಸ್ವರ, ಪದ, ಹಾಗೂ ತಾಲ ಈ ಮೂರರ ಸಂಯೋಗವು ಇರುತ್ತದೆ. ವರ್ಣ ಅಲಂಕಾರ, ಲಯ, ಯತಿ, ಉಪವಾಣಿ, ಮುಂತಾದ ಅಂಗಗಳ ಪಾರಸ್ಪರಿಕ ಸ್ಥಿರ ಅರ್ಥಾತ್ ಧೃವ ಇವುಗಳಲ್ಲಿ ಸಂಬಂಧ ಇರುವುದರಿಂದ ಇದಕ್ಕೆ 'ಧೃವಾ' ಎಂದು ಕರೆಯಲಾಗುತ್ತಿತ್ತು. ಧೃವಾಗೀತೆಗಳು ಶಬ್ದ ಸಂಗೀತ ಅಥವಾ ಕಾವ್ಯ ಸಂಗೀತದ ಒಂದು ಶ್ರೇಷ್ಠ ನಿದರ್ಶನ ಎಂದು ಹೇಳಲಾಗುತ್ತದೆ. ಭರತಮುನಿಯ ಹೇಳಿಕೆಯಂತೆ ಧೃವಗಳ ಪ್ರಯೋಗವನ್ನು ಯಥಾಸ್ಥಾನವನ್ನು ಹಾಗೂ ಯಥಾರಸ ಮಾಡಿದರೆ ನಾಟ್ಯದಲ್ಲಿ ಒಂದು ಹೊಸರೂಪ ಉತ್ಪನ್ನವಾಗುತ್ತದೆ. ಭರತನ ಕಾಲದಲ್ಲಿ ಪ್ರಚಾರದಲ್ಲಿದ್ದ ವಾದ್ಯಗಳ ಉಲ್ಲೇಖವು ಸಹ ನಾಟ್ಯಶಾಸ್ತ್ರದಲ್ಲಿ ಕಂಡುಬರುತ್ತದೆ. ತತ್, ಸುಶೀರ, ಅವನದ್ಧ ಹಾಗೂ ಘನವಾದ್ಯಗಳ ಸಮೂಹದಿಂದ ವಾದ್ಯವೃಂದಗಳ ರಚನೆಯನ್ನು ಆ ಕಾಲದಲ್ಲಿ ಮಾಡಲಾಗುತ್ತಿತ್ತು. ಇಂತಹ ವಾದ್ಯ ವೃಂದಗಳಿಗೆ "ಕುತಪ್" ಎಂಬ ಸಂಜ್ಞೆ ಇತ್ತು. ಇಂತಹ ವಾದ್ಯವೃಂದಗಳ ಸ್ಥಾನ ರಂಗಭೂಮಿಯ ಮಧ್ಯ ಭಾಗದಲ್ಲಿ ಪ್ರೇಕ್ಷಕರ ಮುಂದೆ ಇರುತ್ತಿತ್ತು.

ತತ್ ವಾದ್ಯಗಳಲ್ಲಿ ವಿಪಂಚಿ, ಚಿತ್ರಾ, ಮುಂತಾದ ವೀಣೆಯ ಪ್ರಕಾರಗಳ ಉಲ್ಲೇಖವು ಸುಶಿರವಾದ್ಯಗಳಲ್ಲಿ ಏಳು ರಂಧ್ರಗಳುಳ್ಳ ವೇಣುವೂ, ಅವನದ್ಧ ವಾದ್ಯಗಳಲ್ಲಿ ಮೃದಂಗ, ಪಣವ, ದುರ್ದರ, ಪುಷ್ಕರ, ಭೇರಿ, ಪಟಹ, ಝುಂಝುಂ, ಡಿಂಡಿಮವೂ ಹಾಗೂ ಘನವಾದ್ಯಗಳಲ್ಲಿ ಕಾಸ್ಯ, ಕರತಾಲ, ಜಾಂಝು, ಮಂಜರಿ, ಮುಂತಾದ ವಾದ್ಯಗಳ ಉಲ್ಲೇಖವು ನಾಟ್ಯಶಾಸ್ತ್ರದಲ್ಲಿ ಸಿಗುತ್ತದೆ.

**ಉಪಸಂಹಾರ**

ಒಟ್ಟಾರೆ ಮೇಲಿನ ವಿಷಯ ಗಮನಿಸಿದಾಗ ಜಗತ್ತಿನ ಎಲ್ಲ ಕಲೆಗಳು ನಾಟ್ಯದಲ್ಲಿ ಸಮಾಗಮಗೊಂಡಿವೆ ಎಂದು ತಿಳಿದುಬರುತ್ತದೆ.

**ಪರಾಮರ್ಶನ/ಆಕರ ಗ್ರಂಥಗಳು**


- ಆದ್ಯ ರಂಗಾಚಾರ್ಯ. (2017). *ಭರತಮುನಿ ವಿರಚಿತ ನಾಟ್ಯಶಾಸ್ತ್ರ.* ಅಕ್ಷರ ಪ್ರಕಾಶನ.
- ಪಾಠಕ್, ಬಿ.ಡಿ. (1975). *ಭಾರತೀಯ ಸಂಗೀತ ಚರಿತ್ರೆ.* ಪ್ರಸಾರಾಂಗ. ಕರ್ನಾಟಕ ವಿಶ್ವವಿದ್ಯಾಲಯ.